# ಬಾದಾಮಿಯ ಭಾವೈಕ್ಯತೆಯ ಮಂದಿರ

ಚಿತ್ರದಲ್ಲಿ ಕಾಣುತ್ತಿರುವುದು ಸೈಯ್ಯದ್ ಬಾದ್‌ಷಾ ದರ್ಗಾ ಹಾಗೂ ಶರಣ ಶಿವಪ್ಪಯ್ಯಜ್ಜನವರ ಗುಡಿ. ಇವೆರಡೂ ಒಂದೇ ಜಾಗದಲ್ಲಿ ಇರುವುದು ವಿಶೇಷ. ಅಷ್ಟಕ್ಕೂ ಈ ಭಾವೈಕ್ಯತೆಯ ಮಂದಿರಗಳು ಒಂದೇ ಕಡೆ ಇರುವುದು ಎಲ್ಲಿ ಅಂತೀರಾ. ಅದುಬಾಗಲಕೋಟ ಜಿಲ್ಲೆಯ ಬಾದಾಮಿಯ ಉತ್ತರ ಬೆಟ್ಟದ ಬಾವನ್ ಬಂಡೆ ಕೋಟೆಯ ಮೇಲೆ.

ಈ ಮಹನೀಯರು 16ನೇ ಶತಮಾನದವರು. ಇಬ್ಬರೂ ಸಮಕಾಲೀನರು ಎನ್ನುವುದು ಇಲ್ಲಿನ ಜನರ ಮಾತು. ಸಮಾಜ ಸೇವೆಯಲ್ಲಿ ತೊಡಗಿ ಜನರ ಸಂಕಷ್ಟಗಳಿಗೆ ಪರಿಹಾರವನ್ನು ಕೊಡುತ್ತಿದ್ದ ಇವರು, ಅಂದಿನಿಂದ ಇಂದಿನವರೆಗೆ ಸೌಹಾರ್ದಕ್ಕೆ ಮಾದರಿಯಾಗಿದ್ದಾರೆ. ಪ್ರತಿವರ್ಷ ಹಿಂದೂ–ಮುಸ್ಲಿಂ ಭಕ್ತರ ಸಂಭ್ರಮಾಚರಣೆ ಇದ್ದೆ ಇರುತ್ತದೆ. ಈ ಜಾಗ ಬಾದಾಮಿಯ ಭಾವೈಕ್ಯತೆಯ ಮಂದಿರ ಎಂದೇ ಪ್ರಸಿದ್ಧವಾಗಿದೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ





# ಅಗೋಡದ ಪುರಾತನ ಧಾನ್ಯ ಸಂಗ್ರಹಾಗಾರ

ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ದೋಡಿತಾಲ್ ದಾರಿಯಲ್ಲಿರುವ ಪುಟ್ಟ ಅಗೋಡ ಗ್ರಾಮವು ಹಿಮಾಲಯದ ಮಡಿಲಲ್ಲಿ ಅಡಗಿರುವ ಅಪೂರ್ವ ವಾಸ್ತು ಪರಂಪರೆಯ ಸಾಕ್ಷಿಯಾಗಿದೆ. ಮೊದಲ ನೋಟದಲ್ಲಿ ಮನೆಯಂತೆ ಕಾಣುವ ಕಟ್ಟಡವು, ವಾಸ್ತವದಲ್ಲಿ ಸ್ಥಳೀಯ ರೈತರ ಬಾಳಿನ ಆಧಾರವಾಗಿರುವ ಧಾನ್ಯ ಸಂಗ್ರಹಾಗಾರವಾಗಿರುವುದು ಅಚ್ಚರಿಯ ಸಂಗತಿ.

ಮರದ ಹಲಗೆಗಳು, ಬಲಿಷ್ಠ ಕಂಬಗಳು, ಮರದ ತೊಲೆ ಹಾಗೂ ಸ್ಥಳೀಯ ಕಲ್ಲಿನ ಹಾಳೆಗಳನ್ನು ಉಪಯೋಗಿಸಿ ಕಟ್ಟಲಾದ ಈ ಸಂಗ್ರಹಾಗಾರದಲ್ಲಿ ಕೇವಲ ವಾಸ್ತುಕಲೆಯಷ್ಟೇ ಅಲ್ಲ, ಪ್ರಕೃತಿಯೊಂದಿಗೆ ಹೊಂದಾಣಿಕೆಯ ಜೀವನ ಜ್ಞಾನವೂ ಅಡಗಿದೆ. ಮನೆಯ ಕಿಟಕಿಯಷ್ಟು ಗಾತ್ರದ ಎರಡು ಕಿಂಡಿಗಳನ್ನು ಹೊಂದಿರುವ ಈ ರಚನೆಯ ಮೇಲ್ಛಾವಣಿಯಲ್ಲಿ ತೆಳುವಾದ ಕಲ್ಲಿನ ಪದರಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದೆ. ಸಮುದ್ರ ಮಟ್ಟದಿಂದ 7,300 ಅಡಿ ಎತ್ತರದಲ್ಲಿರುವ ಈ ಪ್ರದೇಶದಲ್ಲಿ ಚಳಿಗಾಲದಲ್ಲಿ ಭಾರೀ ಮಂಜು ಸುರಿಯುತ್ತಿದ್ದು, ಕಟ್ಟಡದ ಮೇಲ್ಭಾಗದಲ್ಲಿ ಮಂಜುಗಡ್ಡೆಗಳು ಜಮೆಯಾಗುತ್ತವೆ. ಆದರೆ, ಒಳಗೆ ಸಂಗ್ರಹಿಸಿರುವ ಧಾನ್ಯಗಳಿಗೆ ಹಾನಿಯುಂಟಾಗದಂತೆ ಈ ವಿನ್ಯಾಸವನ್ನು ರೂಪಿಸಿರುವುದು ಸ್ಥಳೀಯರ ವಾಸ್ತುಶಿಲ್ಪ ನೈಪುಣ್ಯಕ್ಕೆ ಸಾಕ್ಷಿ. ಸುಮಾರು 150 ವರ್ಷಗಳ ಇತಿಹಾಸ ಇರುವ ಈ ಧಾನ್ಯ ಸಂಗ್ರಹಾಗಾರ ಇಂದಿಗೂ ಸುಸ್ಥಿತಿಯಲ್ಲಿರುವುದು ಅಚ್ಚರಿ ಮೂಡಿಸುತ್ತದೆ.

–ಜಿ. ನಾಗೇಂದ್ರ ಕಾವೂರು, ಸಂಡೂರು

# ಪ್ಲಾಸ್ಟಿಕ್ ಸಂಗ್ರಹಕ್ಕೊಂದು ‘ಬಾಟಲಿ’

ಪ್ಲಾಸ್ಟಿಕ್ ಎಂದಾಕ್ಷಣ ಹಾದಿಬದಿಯಲ್ಲಿ ಹೆಚ್ಚಾಗಿ ಕಾಣುವುದು ಪ್ಲಾಸ್ಟಿಕ್‌ನ ಖಾಲಿ ಬಾಟಲಿಗಳು. ಇವುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದಕ್ಕೆ ಕಡಿವಾಣ ಹಾಕುವ ಸಲುವಾಗಿ ಪುತ್ತೂರು ನಗರಸಭೆ ವಿನೂತನ ಹೆಜ್ಜೆಯಿಟ್ಟಿದೆ. ಕಬ್ಬಿಣದ ಸರಳುಗಳಿಂದ ಬಾಟಲಿ ಮಾದರಿಯನ್ನು ರಚಿಸಿದ್ದು, ಪ್ಲಾಸ್ಟಿಕ್‌ನ ಖಾಲಿ ಬಾಟಲಿಗಳು ಸೇರಿದಂತೆ ಪ್ಲಾಸ್ಟಿಕ್‌ನ ಅನೇಕ ವಸ್ತುಗಳನ್ನು ಇದರಲ್ಲಿ ತಂದು ಹಾಕುವಂತೆ ಅಲ್ಲಿನ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ನಗರ ವ್ಯಾಪ್ತಿಯ ವಿವಿಧೆಡೆ ಇಂತಹ ಮಾದರಿಗಳನ್ನು ಇಡಲಾಗಿದೆ. ನಗರಸಭೆಯ ಈ ಕಾರ್ಯ ಅನುಕರಣೀಯ.

–ಎಸ್.ಎನ್. ಅಮೃತ, ಪುತ್ತೂರು

